**GOOD EVENING STUDENT TODAY I AM SENDING YOU GRAMMAR NOTES AND WORK SHEET ( LAST PAGE )TO SLOVE QUESTIONS**

## ವರ್ಣಮಾಲೆ

ಕನ್ನಡದಲ್ಲಿ ಒಟ್ಟು 49 ಅಕ್ಷರಗಳಿವೆ. ಇವುಗಳನ್ನು ವರ್ಣಗಳೆಂದು ಕರೆಯುತ್ತಾರೆ. ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ ‘ ವರ್ಣಮಾಲೆ’ ಎಂದು ಹೆಸರು.

**ವರ್ಣಮಾಲೆಯಲ್ಲಿ ಮೂರು ವಿಧಗಳು**

ಅ. ಸ್ವರಾಕ್ಷರಗಳು ಆ. ವ್ಯಂಜನಾಕ್ಷರಗಳು ಇ. ಯೋಗವಾಹಗಳು

**ಅ. ಸ್ವರಾಕ್ಷರಗಳು–** ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಾಕ್ಷರಗಳಾಗಿವೆ.

ಒಟ್ಟು ಸ್ವರಾಕ್ಷರಗಳು– 13

**ಸ್ವರಗಳಲ್ಲಿ ಎರಡು ವಿಧಗಳು**

ಹ್ರಸ್ವಸ್ವರಗಳು ದೀರ್ಘಸ್ವರಗಳು

1. ಹ್ರಸ್ವಸ್ವರಗಳು– ಒಂದು ಮಾತ್ರ ಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳು ಹ್ರಸ್ವಸ್ವರಗಳು.

ಅವು– **ಅ ಇ ಉ ಋ ಎ ಒ**

2. ದೀರ್ಘಸ್ವರಗಳು– ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳು

ಅವು– **ಆ ಈ ಊ ಏ ಐ ಓ ಔ**

**ಆ. ವ್ಯಂಜನಾಕ್ಷರಗಳು –** ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು ವ್ಯಂಜನಾಕ್ಷರಗಳಾಗಿವೆ. ಇವು

ಒಟ್ಟು 34 ವ್ಯಂಜನಾಕ್ಷರಗಳು.

ವ್ಯಂಜನಾಕ್ಷರಗಳಲ್ಲಿ ಎರಡು ವಿಧಗಳು

ವರ್ಗೀಯ ವ್ಯಂಜನಗಳು ಅವರ್ಗೀಯ ವ್ಯಂಜನಗಳು

## 1. ವರ್ಗೀಯ ವ್ಯಂಜನಗಳು–

**ಕ್ ವರ್ಗ – ಕ್ ಖ್ ಗ್ ಘ್ ಙ್**

**ಚ್ ವರ್ಗ – ಚ್ ಛ್ ಜ್ ಝ್ ಞ್**

**ಟ್ ವರ್ಗ – ಟ್ ಠ್ ಡ್ ಢ್ ಣ್**

**ತ್ ವರ್ಗ – ತ್ ಥ್ ದ್ ಧ್ ನ್**

**ಪ್ ವರ್ಗ – ಪ್ ಫ್ ಬ್ ಭ್ ಮ್**

* **ಅಲ್ಪಪ್ರಾಣಾಕ್ಷರಗಳು –** ಕಡಿಮೆ ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಅಲ್ಪಪ್ರಾಣಾಕ್ಷರಗಳು.

ಉದಾ: ಕ ಚ ಟ ತ ಪ

ಗ ಜ ಡ ದ ಬ

* **ಮಹಾಪ್ರಾಣಾಕ್ಷರಗಳು–** ಹೆಚ್ಚು ಉಸಿರು ಕೊಟ್ಟು ಉಚ್ಚರಿಸಲಾಗುವ ವ್ಯಂಜನಗಳು ಮಹಾಪ್ರಾಣಾಕ್ಷರಗಳಾಗಿವೆ.

ಉದಾ: ಖ ಛ ಠ ಥ ಫ

ಘ ಝ ಢ ಧ ಭ

***ಅನುನಾಸಿಕಾಕ್ಷರಗಳು** – ಮೂಗಿನ ಸಹಾಯದಿಂದ ಉಚ್ಚರಿಸಲಾಗುವ ವ್ಯಂಜನಗಳು ಅನುನಾಸಿಕಾಕ್ಷರಗಳು.

**ಉದಾ – ಙ್ ಞ್ ಣ್ ನ್ ಮ್**

**2. ಅವರ್ಗೀಯ ವ್ಯಂಜನಗಳು–** 'ಯ್' ಕಾರದಿಂದ 'ಳ್' ಕಾರದವರೆಗಿನ 09 ಅಕ್ಷರಗಳು ಅವರ್ಗೀಯ ವ್ಯಂಜನಗಳಾಗಿವೆ.

**ಉದಾ – ಯ್ ರ್ ಲ್ ವ್ ಶ್ ಷ್ ಸ್ ಹ್ ಳ್**

**3. ಯೋಗವಾಹಗಳು** – 'ಯೋಗವಾಹ' ಎಂದರೆ 'ಜೊತೆಗೂಡಿ ಹೋಗು' ಎಂದರ್ಥ. ಇವು ಯಾವುದಾದರೂ ಒಂದು ಸ್ವರಾಕ್ಷರದ ಜೊತೆಗೆ ಕೂಡಿಕೊಂಡರೆ ಮಾತ್ರ ಉಚ್ಚರಿಸಲು ಸಾಧ್ಯವಾಗುತ್ತದೆ.

**ಯೋಗವಾಹಗಳಲ್ಲಿ ಎರಡು ವಿಧಗಳು**

**ಅನುಸ್ವಾರ (ಂ)** **ವಿಸರ್ಗ (ಃ)**

**ಉದಾ– ಕಂಬನಿ** **ದುಃಖ**

**ವಿರುದ್ಧಾರ್ಥಕ ಪದಗಳು**

1. ಅಂಕುಶ Xನಿರಂಕುಶ ಚೇತನ X ಅಚೇತನ
2. ಅದೃಷ್ಟ X ದುರಾದೃಷ್ಟ ಕೃತಜ್ಞ X ಕೃತಘ್ನ

ಉತ್ಸಾಹ X ನಿರುತ್ಸಾಹ

ಕ್ರಮ X ಅಕ್ರಮ

ಕಾಲ X ಅಕಾಲ

ಚಲ X ನಿಶ್ಚಲ

ಜಂಗಮ X ಸ್ಥಾವರ

ಅಂತ X ಅನಂತ

ಅಧ್ಯಯನ X ಅನಧ್ಯಯನ

ಉದಾರ X ಅನುದಾರ

ಕನಸು X ನನಸು

ಕೀರ್ತಿ X ಅಪಕೀರ್ತಿ

ಚಿಂತೆ X ನಿಶ್ಚಿಂತೆ

ಜ್ಞಾನ X ಅಜ್ಞಾನ

ಅಕ್ಷಯ X ಕ್ಷಯ

ಅಧಿಕೃತ X ಅನಧಿಕೃತ

ಅಕಲ್ಮಶ X ನಿಷ್ಕಲ್ಮಶ

# ತತ್ಸಮ – ತದ್ಭವ

ಸಂಸ್ಕೃತದ ಮೂಲ ಪದವು ತತ್ಸಮ , ಅದೇ ಪದದ ಅಪಭ್ರಂಶವಾದ ಕನ್ನಡ ಪದವು ತದ್ಭವ –ಇವುಗಳನ್ನು ತತ್ಸಮ – ತದ್ಭವಗಳೆಂದು ಕರೆಯುತ್ತಾರೆ.

ಆಶ್ಚರ್ಯ – ಅಚ್ಚರಿ
ಪಟ್ಟಣ – ಪತ್ತನ
ಪ್ರಯಾಣ– ಪಯಣ
ಧ್ಯಾನ – ಜಾನ
ವರ್ಷ– ವರುಷ
ವೀರ – ಬೀರ
ಯುಗ– ಜುಗ
ಜಟಾ – ಜಡೆ
ಮೂಗ – ಮೂಕ

ಸ್ನೇಹ – ನೇಹ
ಯಶಸ್ – ಯಶಸ್ಸು
ಮುಖ – ಮೊಗ
ಸರಸ್ವತಿ –ಸರಸತಿ
ಪುಸ್ತಕ – ಹೊತ್ತಿಗೆ
ಮೂರ್ತಿ – ಮೂರುತಿ
ಪ್ರಸಾದ – ಹಸಾದ
ಸ್ತಂಭ – ಕಂಬ

ಶರ್ಕರಾ – ಸಕ್ಕರೆ
ಅಕ್ಷರ –ಅಕ್ಕರ
ಕಾರ್ಯ –ಕಜ್ಜ
ಅಗ್ನಿ – ಅಗ್ಗಿ

ಶೂನ್ಯ – ಸೊನ್ನೆ
ಚಂಪಕ – ಸಂಪಿಗೆ
ಉದ್ಯೋಗ – ಉಜ್ಜುಗ
ದಾರಿ– ಬೆಟ್ಟ

# ವಚನಗಳು

ವಚನ ಎಂದರೆ ಸಂಖ್ಯೆ ಎಂದರ್ಥ

ವಚನದಲ್ಲಿ ಎರಡು ವಿಧಗಳು

**ಏಕವಚನ** – ಒಂದು ಎಂಬುದನ್ನು ಸೂಚಿಸಿವ ಶಬ್ದಗಳಿಗೆ ಏಕವಚನ ಎನ್ನುವರು.

ಬಹುವಚನ – ಒಂದಕ್ಕಿಂತ ಹೆಚ್ಚು ಎಂದು ಸೂಚಿಸುವ ಶಬ್ದಗಳಿಗೆ ಬಹುವಚನ ಎನ್ನುವರು.

| ಏಕವಚನ | ಬಹುವಚನ |
|---|---|
| 1 ಎತ್ತು | ಎತ್ತುಗಳು |
| 2. ನಾಯಕ | ನಾಯಕರು |
| 3. ಅಣ್ಣಂದಿರು | ಅಣ್ಣ |
| 4. ಪತ್ರಿಕೆಗಳು | ಪತ್ರಿಕೆ |
| 5. ಪತ್ರಗಳು | ಪತ್ರ |
| 6. ಮಿತ್ರರು | ಮಿತ್ರ |
| 7. ಅದು | ಅವು |
| 8. ನೀವು | ನೀನ |

ಲಿಂಗಗಳು

ವಸ್ತು ,ಸ್ತ್ರೀ, ಮತ್ತು ಪುರುಷರು ಎಂದು ಸೂಚಿಸಲು ಬಳಸುವ ಪದಗಳೇ ಲಿಂಗವಾಚಕಗಳಾಗಿವೆ.

ಲಿಂಗಗಳಲ್ಲಿ ಮೂರು ವಿಧಗಳು

1. ಪುಲ್ಲಿಂಗ – ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಪುರುಷ ಎಂಬ ಅರ್ಥ ಹೊಳೆಯುವುದೋ ಅದು ಪುಲ್ಲಿಂಗ

2. ಸ್ತ್ರೀಲಿಂಗ –ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಸ್ತ್ರೀ ಎಂಬ ಅರ್ಥ ಹೊಳೆಯುವುದೋ ಅದು ಸ್ತ್ರೀಲಿಂಗ

3. ನಪುಂಕ ಲಿಂಗ – ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಸ್ತ್ರೀ ಅಥವಾ ಪುರುಷ ಅಲ್ಲ ಎಂಬ ಅರ್ಥ ಹೊಳೆದರೆ ಅದು ನಪುಂಸಕಲಿಂಗ

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಕಲಿಂಗ |
|---|---|---|
| ಅವನು | ಅವಳು | ಮೋಡ |
| ಕಲಾವಿದ | ಕಲಾವಿದೆ | ಕಲ್ಲು |
| ಸಚಿವ | ಸಚಿವೆ | ನಾಯಿ |
| ಬಾಲಕ | ಬಾಲಕಿ | ಹಣ್ಣು |
| ಅಪ್ಪ | ಅಮ್ಮ | ಎಲೆ |
| ರಾಮ | ಸೀತಾ | ಬಳ್ಳಿ |
| ಅರಸ | ಅರಸಿ | ಆಕಾಶ |
| ಒಳ್ಳೆಯವನು | ಒಳ್ಳೆಯವಳು | ಕಟ್ಟಿಗೆ |
| ಚಿಕ್ಕಪ್ಪ | ಚಿಕ್ಕಮ್ಮ | ಗಿಳಿ |
| ಸಹೋದರ | ಸಹೋದರಿ | ಪುಸ್ತಕ |

## ನಾಮಪದ

ವ್ಯಕ್ತಿ ,ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರುಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುವರು.

ಉದಾಹರಣೆ – ಮಂಡ್ಯ ತಿಮ್ಮಣ್ಣ ಹುಲಿ ಕಲ್ಲು

ನಾಮಪದಗಳಲ್ಲಿ ಮೂರು ವಿಧಗಳು

**ರೂಢನಾಮ –** ರೂಢಿಯಿಂದ ಬಂದ ಪದಗಳಿಗೆ ರೂಢನಾಮ ಎನ್ನುವರು.

**ಉದಾ** – ನದಿ ಪರ್ವತ ಹೆಂಗಸು ಗಂಡಸು ಮಕ್ಕಳು ಜನರು ನದಿ ಬೆಟ್ಟ ಪಟ್ಟಣ ದೇಶ ಇತ್ಯಾದಿ.

**ಅಂಕಿತನಾಮ –** ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.

**ಉದಾ** – ಕೂಡಲಸಂಗಮದೇವ ಪುರಂದರವಿಠಲ ಗಂಗಾ ಧಾರವಾಡ ಬ್ರಹ್ಮಪುತ್ರ ಭಾರತ

4. **ಅನ್ವರ್ಥನಾಮ –** ರೂಪ ,ಗುಣ ವೃತ್ತಿ ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲಾ ಅನ್ವರ್ಥನಾಮಗಳು

**ಉದಾ** – ವ್ಯಾಪಾರಿ ರೋಗಿ ಜಾಣ ಪಂಡಿತ ವೈದ್ಯೆ ವಕೀಲ ಶಿಕ್ಷಕಿ ವಿಧ್ಯಾರ್ಥಿ ಪೂಜಾರ ಬಳೆಗಾರ ಯೋಗಿ ವಿಜ್ಞಾನಿ

## ಸರ್ವ ನಾಮಪದ

ನಾಮಪದಗಳ ಬದಲಾಗಿ ಬಳಸುವ ಪದಗಳನ್ನು ‘ಸರ್ವನಾಮ’ ಎನ್ನತ್ತೇವೆ.

ಸರ್ವನಾಮಗಳಲ್ಲಿ ಮೂರು ವಿಧಗಳು

1. **ಪುರುಷಾರ್ಥಕ ಸರ್ವನಾಮ** – ನಾನು ನನ್ನನ್ನು ನನ್ನಿಂದ ನಮ್ಮ ನೀನು ನಿನ್ನನ್ನು ನಿನ್ನನ್ನು ನೀವು

ನಿಮ್ಮನ್ನು ನಿಮ್ಮಿಂದ ನಿಮ್ಮ ಅವನು ಅವಳು ಅವರು ಇತ್ಯಾದಿ

2. **ಆತ್ಮಾರ್ಥಕ ಸರ್ವನಾಮ** – ತಾನು ತಾವು ತಮ್ಮನ್ನು ತನಗೆ ತಮ್ಮ ತನ್ನ

3. **ಪ್ರಶ್ನಾರ್ಥಕ ಸರ್ವನಾಮ** – ಯಾರು , ಎಂಥವನು ಎಂಥವಳು

## ವಿಭಕ್ತಿ ಪ್ರತ್ಯಯ

| ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯ ಸೇರಿದಾಗ |
|---|---|---|
| **ಪ್ರಥಮಾ** | ಉ | ರಾಜ |
| **ದ್ವಿತೀಯಾ** | ಅನ್ನು | ರಾಜನನ್ನು |
| **ತೃತೀಯಾ** | ಇಂದ | ರಾಜನಿಂದ |
| **ಚತುರ್ಥಿ** | ಗೆ, ಇಗೆ ಅಕ್ಕೆ | ರಾಜನಿಗೆ |
| **ಪಂಚಮಿ** | ದೆಸೆಯಿಂದ | ರಾಜನ ದೆಸೆಯಿಂದ |
| **ಷಷ್ಠಿ** | ಅ | ರಾಜನ |
| **ಸಪ್ತಮಿ** | ಅಲ್ಲಿ | ರಾಜನಲ್ಲಿ |

## ವಿಭಕ್ತಿ ಪ್ರತ್ಯಯ

| ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮಪ್ರಕೃತಿಗೆ ವಿಭಕ್ತಿ ಪ್ರತ್ಯಯ ಸೇರಿದಾಗ |
|---|---|---|
| **ಪ್ರಥಮಾ** | ಉ | ರಾಣಿ |
| **ದ್ವಿತೀಯಾ** | ಅನ್ನು | ರಾಣಿಯನ್ನು |
| **ತೃತೀಯಾ** | ಇಂದ | ರಾಣಿಯಿಂದ |
| **ಚತುರ್ಥಿ** | ಗೆ, ಇಗೆ ಅಕ್ಕೆ | ರಾಣಿಗೆ |
| **ಪಂಚಮಿ** | ದೆಸೆಯಿಂದ | ರಾಣಿಯ ದೆಸೆಯಿಂದ |
| **ಷಷ್ಠಿ** | ಅ | ರಾಣಿಯ |
| **ಸಪ್ತಮಿ** | ಅಲ್ಲಿ | ರಾಣಿಯಲ್ಲಿ |

# work sheet

## ವ್ಯಾಕರಣ ಭಾಗ

**1. ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ?**

2. ಯ್ ರ್ ಲ್ ವ್ – ಈ ವ್ಯಂಜನಗಳನ್ನು ಏನೆಂದು ಕರೆಯುತ್ತೇವೆ?

**3. ಸ್ವರಗಳಲ್ಲಿ ಎಷ್ಟು ಪ್ರಕಾರಗಳು ಇವೆ?**

**ಪ್ರಶ್ನೆ ಆ ಕೆಳಗಿನ ಪದಗಳ ಅರ್ಥ ಬರೆಯಿರಿ.**

**1. ಪೂರೆ – 2 ಭೀತಿ – 3.ಅಂಗಳ – 4 ಸಾಂತ್ವನ–**

**ಪ್ರಶ್ನೆ ಇ – ಕೆಳಗಿನ ವಾಕ್ಯಗಳಲ್ಲಿನ ಸರ್ವನಾಮಪದಗಳನ್ನು ಗುರುತಿಸಿ.**

1. ಅವರು ಎಲ್ಲರೂ ಜಾತ್ರೆಗೆ ಹೋದರು.
2. ಅವಳು ಸುಂದರವಾದ ಚಿತ್ರ ಬಿಡಿಸಿದರು.
3. ತಾವು ಇಲ್ಲಿ ಬನ್ನಿ

**ಪ್ರಶ್ನೆ ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿ**

1 ಪಟ್ಟಣ : ರೂಢನಾಮ :: ಕೂಡಲಸಂಗಮದೇವ ______

2. ಯೋಗಿ : ಅಂಕಿನಾಮ : : ದೇಶ ________

**ಪ್ರಶ್ನೆ ಉ ಕೆಳಗಿನ ಪದಗಳ ತತ್ಸಮ ಪದಗಳಿಗೆ ತದ್ಭವ ಪದ ಬರೆಯಿರಿ.**

1. ಪಟ್ಟಣ – 2.ವರ್ಷ – 3. ಯುಗ–